**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ**
**ರಾಷ್ಟ್ರೀಯಾ ಸೇವಾ ಯೋಜನೆ**

ಸಂ:ಡಿಟಿಇ/ಎನ್ಎಸ್ಎಸ್/02/ಐಡಿಪಿ/2016-17/01

ಸಂಯೋಜನಾಧಿಕಾರಿ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01,
ದಿನಾಂಕ: 03-04-2017

ವಿಷಯ: ಸಹಾಯಕ ನಿರ್ದೇಶಕರು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಉಡುಪಿ ಇವರು ಡಾ॥ ಬಿ.ಆರ್. ಅಂಬೇಡ್ಕರ್ ರವರ 125 ನೇ ಜನ್ಮ ದಿನಾಚರಣೆ ಅಂಗವಾಗಿ ಆಯೋಜಿಸಿರುವ ಅಂಬೇಡ್ಕರ್ ಅಧ್ಯಯನ ಶಿಬಿರಕ್ಕೆ ಸ್ವಯಂಸೇವಕರನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: ರಾಜ್ಯ ಸಂಪರ್ಕಾಧಿಕಾರಿಯವರ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/34/2016-17/**473** ದಿನಾಂಕ: 27.03.2017

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ॥ ಬಿ.ಆರ್.ಅಂಬೇಡ್ಕರ್ ಅವರು ಭಾರತದಲ್ಲಿ ಸಮಾನತೆಯ ಸಿದ್ಧಾಂತವನ್ನು ಪ್ರತಿಪಾದಿಸಿದರು. ದಲಿತ ಮತ್ತು ಹಿಂದುಳಿದ ವರ್ಗದವರಲ್ಲಿ ಆತ್ಮಾಭಿಮಾನವನ್ನು ಮೂಡಿಸಿದವರು. ಭಾರತದ ಸಂವಿಧಾನದ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದರು. ಒಟ್ಟಿನಲ್ಲಿ ಅವರ ಸಿದ್ಧಾಂತಗಳು ಭಾರತದ ಸಾಮಾಜಿಕ ವ್ಯವಸ್ಥೆಯ ಮೇಲೆ ಮಹತ್ವದ ಪರಿಣಾಮವನ್ನು ಬೀರಿದೆ. ಇಂತಹ ಮಾನವತಾವಾದಿ ಆದರ್ಶಪ್ರಾಯರಾಗಿರುವ ಸಂವಿದಾನ ಶಿಲ್ಪಿ ಡಾ॥ ಬಿ.ಆರ್.ಅಂಬೇಡ್ಕರ್‌ರವರ ಆದರ್ಶಗಳನ್ನು, ಚಿಂತನೆಗಳನ್ನು, ವಿಚಾರಗಳನ್ನು, ಅವರ ಜೀವನ ಮೌಲ್ಯಗಳನ್ನು, ಇಂದಿನ ಯುವಪೀಳಿಗೆಯನ್ನು ಉತ್ತೇಜಿಸುವುದಕ್ಕಾಗಿ ವಿಚಾರಗೋಷ್ಟಿ, ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸುವ ನಿಟ್ಟಿನಲ್ಲಿ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಉಡುಪಿ ಮತ್ತು ರಾಜ್ಯ ಎನ್.ಎಸ್.ಎಸ್.ಕೋಶ ಇವರು 2 ದಿನಗಳ ರಾಜ್ಯ ಮಟ್ಟದ ಅಧ್ಯಯನ ಶಿಬಿರವನ್ನು ಡಾ॥ ಬಿ.ಆರ್. ಅಂಬೇಡ್ಕರ್ ರವರ 125 ನೇ ಜನ್ಮ ದಿನಾಚರಣೆ ಅಂಗವಾಗಿ ದಿನಾಂಕ 14.04.2017 ಮತ್ತು 15.04.2017ರಂದು ಆಯೋಜಿಸಿರುತ್ತಾರೆ. ಸದರಿ ಈ ಶಿಬಿರಕ್ಕೆ ಸ್ವಯಂಸೇವಕ/ಸೇವಕಿಯರಿಗೆ ಪ್ರಯಾಣ ವೆಚ್ಚವನ್ನು ನೀಡಲಾಗುವುದು ಹಾಗೂ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು. ಸ್ವಯಂಸೇವಕರು ದಿನಾಂಕ 13.04.2017ರಂದು ಸಂಜೆ 5.00 ಗಂಟೆಯಿಂದ 14.04.2017ರ ಬೆಳಿಗ್ಗೆ 8.00 ಗಂಟೆಯೊಳಗೆ ಸಹಾಯಕ ನಿರ್ದೇಶಕರು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಾತ್ಮ ಗಾಂಧೀ ಕ್ರೀಡಾಂಗಣ, ಅಜ್ಜರಕಾಡು, ಉಡುಪಿ ಇವರಲ್ಲಿ ವರದಿ ಮಾಡಿಕೊಳ್ಳುವುದು.

ನಿಯೋಜಿಸಿದ ಸ್ವಯಂ ಸೇವಕ ಸೇವಕಿಯರನ್ನು ಬಿಡುಗಡೆಗೊಳಿಸಿ ಮಾಹಿತಿಯನ್ನು ಈ ರಾ.ಸೇ.ಯೋ ಕಛೇರಿಗೆ ಕಳುಹಿಸುವುದು.

| ಕ್ರ ಸಂ | ಪಾಲಿಟೆಕ್ನಿಕ್ ಹೆಸರು | ಸ್ವಯಂ ಸೇವಕ | ಸ್ವಯಂ ಸೇವಕಿ | ಕಾರ್ಯಕ್ರಮಾಧಿಕಾರಿ |
|---|---|---|---|---|
| 01 | ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ | 05 | 05 | 01 |

ನಿರ್ದೇಶಕರು

ಶಿಬಿರಾರ್ಥಿಗಳು ಬರುವಾಗ ಅವರಿಗೆ ತಾವು ನಿಯೋಜನಾ ಪತ್ರ ನೀಡಿ ಶಿಬಿರಕ್ಕೆ ನಿಯೋಜಿಸುವುದು ಹಾಗೂ ಈ ಪತ್ರದೊಂದಿಗೆ ಶಿಬಿರಾರ್ಥಿಗಳಿಗೆ ಬೇಕಾಗುವ ಮಾಹಿತಿಗಳನ್ನೊಳಗೊಂಡ ಪ್ರತಿಯನ್ನು ಲಗತ್ತಿಸಿದೆ.

<u>ಶಿಬಿರಾರ್ಥಿಗಳು ಬರುವಾಗ ಈ ಕೆಳಗಿನ ವಸ್ತುಗಳನ್ನು ತೆಗೆದುಕೊಂಡು ಬರುವುದು.</u>

1. ಶಿಬಿರಕ್ಕೆ ನಿಯೋಜಿಸಿದ ಬಗ್ಗೆ ಸಂಯೋಜನಾಧಿಕಾರಿ/ಪ್ರಾಂಶುಪಾಲರ ಪತ್ರ.
2. ಶಿಬಿರದ ಅವಧಿಗೆ ಬೇಕಾದ ಬಟ್ಟೆ, ಹೊದಿಕೆ, ಊಟದ ತಟ್ಟೆ, ಲೋಟ
3. ಕಾಲೇಜಿನ ಗುರುತುಚೀಟಿ (Identity Card) ಮತ್ತು ಇಂಡೆಂಮ್ನಿಟಿ ನಮೂನೆ
4. ಕೀ ಇರುವ ಸೂಟ್‌ಕೇಸ್ ಮತ್ತು ಟಾರ್ಚ್, ಔಷಧಿಗಳು ಏನಾದರು ಇದ್ದರೆ.
5. ಬೆಲೆಬಾಳುವ ವಸ್ತು, ಚಿನ್ನಾಭರಣ ಇತ್ಯಾದಿ ತೆಗೆದುಕೊಂಡು ಬರಬಾರದು. ಕಳೆದುಕೊಂಡಲ್ಲಿ ಶಿಬಿರದ ವ್ಯವಸ್ಥಾಪಕರು ಜವಾಬ್ದಾರರಲ್ಲ.
6. ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಬೇಕಾದ ಉಡುಗೆ ತೊಡುಗೆ.
7. ವಸ್ತು ಪ್ರದರ್ಶನಕ್ಕೆ ಬೇಕಾದ ರಾ.ಸೇ.ಯೋಜನೆಗೆ ಸಂಬಂಧಿಸಿದ ಫೋಟೋ,ಪೋಸ್ಟರ್, ಬ್ಯಾನರ್, ಪ್ರಶಸ್ತಿಗಳು, ಪತ್ರಿಕಾ ವರದಿ ಹಾಗೂ ಸ್ಥಳೀಯ ಸಂಸ್ಕೃತಿ ಪ್ರತಿಪಾದಿಸುವ ಪರಿಕರಗಳು
8. ಶಿಬಿರದ ಮೊದಲನೇ ದಿನ ಸಂಸ್ಕೃತಿಕ ಮೆರವಣಿಗೆ ಇದೆ. ಆಯಾ ಜಿಲ್ಲೆಯ ಸಾಂಪ್ರದಾಯಿಕ ಉಡುಗೆ ತೊಡುಗೆ (Traditional Dress)ಗಳನ್ನು ತರಬೇಕು

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನವರನ್ನು ಸಂಪರ್ಕಿಸಬಹುದು:

| | |
|---|---|
| ಡಾ॥ ಗಣನಾಥ ಶೆಟ್ಟಿ,<br>ರಾಜ್ಯ ಎನ್.ಎಸ್.ಎಸ್.ಅಧಿಕಾರಿ ಹಾಗೂ<br>ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,<br>ರಾಷ್ಟ್ರೀಯ ಸೇವಾ ಯೋಜನಾ ಕೋಶ,<br>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.<br><br>ಮೊಬೈಲ್: 99645 83433 | ಡಾ॥ ರೋಶನ್ ಶೆಟ್ಟಿ,<br>ಸಹಾಯಕ ನಿರ್ದೇಶಕರು,<br>ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ,<br>ಮಹಾತ್ಮ ಗಾಂಧೀ ಕ್ರೀಡಾಂಗಣ,<br>ಅಜ್ಜರಕಾಡು, ಉಡುಪಿ<br>ಮೊಬೈಲ್: 94808 86467 |